ಉತ್ತರ

1. ಹುಬ್ಬಳ್ಳಿ-ಧಾರವಾಡ ಮಹಾನಗರಪಾಲಿಕೆ ವ್ಯಾಪ್ತಿಯಲ್ಲಿ ಬರುವ ಸರ್ಕಾರಿ ಕಿರಿಯ ಪ್ರಾಥಮಿಕ ಶಾಲೆಗಳು 33 ಹಾಗೂ ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆಗಳು 90. ಒಟ್ಟು 123 ಶಾಲೆಗಳಿವೆ. (ಕನ್ನಡ ಮತ್ತು ಭಾಷಾ ಅಲ್ಪಸಂಖ್ಯಾತರು ಸೇರಿ).

2. ಸ್ವಂತ ಕಟ್ಟಡಗಳಲ್ಲಿ ಒಟ್ಟು 98 ಶಾಲೆಗಳು ನಡೆಯುತ್ತಿವೆ. ಬಾಡಿಗೆ ಕಟ್ಟಡಗಳಲ್ಲಿ ಒಟ್ಟು 25 ಶಾಲೆಗಳು ನಡೆಯುತ್ತಿವೆ.

3. ಮಕ್ಕಳ ಹಾಜರಾತಿಗನುಗುಣವಾಗಿ ಕೊರತೆ ಇದೆ.

4. ಹೌದು.

5. 2001-02ನೇ ಸಾಲಿನಲ್ಲಿ ರಾಜ್ಯ ವಲಯ ಯೋಜನೆಯಡಿ 5 ಶಾಲಾ ಕೊಠಡಿಗಳನ್ನು ಮಂಜೂರು ಮಾಡಲಾಗಿದೆ. ಅಲ್ಲದೆ 7 ಶಾಲಾ ಕೋಣೆಗಳನ್ನು ಮಂಜೂರು ಮಾಡುವಂತೆ ಜಿಲ್ಲಾ ಪಂಚಾಯತ್‌ಗೆ ಪ್ರಸ್ತಾವನೆ ಸಲ್ಲಿಸಿ ಕ್ರಮ ಕೈಗೊಳ್ಳಲಾಗುತ್ತಿದೆ.

ಕರ್ನಾಟಕ ವಿಶ್ವವಿದ್ಯಾನಿಲಯದ ವೈದ್ಯಕೀಯ ಪರೀಕ್ಷೆಯಲ್ಲಿ ಉತ್ತರ ಪತ್ರಿಕೆ ಬದಲಾವಣೆ.

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ: 239(659)

ಸದಸ್ಯರ ಹೆಸರು: ಶ್ರೀ ಜಗದೀಶ್ ಶೆಟ್ಟರ್(ಹುಬ್ಬಳ್ಳಿ ಗ್ರಾಮೀಣ)

ಉತ್ತರಿಸುವ ಸಚಿವರು: ಡಾ॥ಜಿ.ಪರಮೇಶ್ವರ್(ಉನ್ನತ ಶಿಕ್ಷಣ ಹಾಗೂ ವೈದ್ಯಕೀಯ ಶಿಕ್ಷಣ ರಾಜ್ಯ ಸಚಿವರು)

ಪ್ರಶ್ನೆ

ಅ) ಕರ್ನಾಟಕ ವಿಶ್ವವಿದ್ಯಾಲಯದ ವೈದ್ಯಕೀಯ ಪರೀಕ್ಷೆಯಲ್ಲಿ ಉತ್ತರ ಪತ್ರಿಕೆಗಳನ್ನು ಬದಲಾವಣೆ ಮಾಡಿರುವುದು ನಿಜವೇ? ಹಾಗಿದ್ದಲ್ಲಿ ಈ ಅವ್ಯವಹಾರಕ್ಕೆ ಹೊಣೆಗಾರರು ಯಾರು?

ಆ) ಈ ಪ್ರಕರಣದ ಬಗ್ಗೆ ತನಿಖೆ ನಡೆಸಲು ಸಿ.ಓ.ಡಿ.ಗೆ ವಹಿಸಲಾಗಿದೆಯೇ?

ಹಾಗಿದ್ದಲ್ಲಿ ಎಂದು ವಹಿಸಲಾಯಿತು?

ಇ) ಸಿ.ಒ.ಡಿ. ತನ್ನ ವರದಿಯನ್ನು ಸಲ್ಲಿಸಿದೆಯೇ? (ವಿವರ ನೀಡುವುದು)

ಈ) ವರದಿ ಸಲ್ಲಿಸದಿದ್ದಲ್ಲಿ ಈ ವಿಳಂಬಕ್ಕೆ ಕಾರಣವೇನು?

ಉತ್ತರ

ಅ) ಹೌದು. ವಿಶ್ವವಿದ್ಯಾಲಯದ ವೈದ್ಯಕೀಯ ಪರೀಕ್ಷೆಗಳಲ್ಲಿ ಉತ್ತರ ಪರೀಕ್ಷೆಗಳ ಮರು ಮೌಲ್ಯಮಾಪನ ಮಾಡುವ ಸಮಯದಲ್ಲಿ ಪರೀಕ್ಷಕರು ಉತ್ತರ ಪತ್ರಿಕೆಗಳಲ್ಲಿ ಕೆಲವು ವ್ಯತ್ಯಾಸಗಳನ್ನು ಗಮನಿಸಿ ಅದನ್ನು ವಿಶ್ವವಿದ್ಯಾಲಯದ ಗಮನಕ್ಕೆ ತಂದಾಗ ಸದರಿ ವಿಷಯವನ್ನು ವಿಶ್ವವಿದ್ಯಾಲಯವು ಪರೀಕ್ಷೆಗಳಲ್ಲಿ ನಡೆಯುವ ಅವ್ಯವಹಾರಗಳನ್ನು ಪರಿಶೀಲಿಸಲೆಂದು ನೇಮಿಸಿದ ಸಮಿತಿ (ಎಂ.ಪಿ.ಸಿ.)ಗೆ ತಕ್ಷಣ ತನಿಖೆಗಾಗಿ ಒಪ್ಪಿಸಲಾಯಿತು. ಇದು ಅಲ್ಲದೆ, ಈ ವಿಷಯ ಕುರಿತು ಸಂಬಂಧಿಸಿದಂತೆ ಪೋಲೀಸ್ ಕೇಸನ್ನು ಸಹಿತ ದಾಖಲು ಮಾಡಲಾಗಿದೆ. ಹಾಗೂ ತನಿಖೆ ನಡೆಸಲಾಗುತ್ತಿದೆ.

ಈ ಪ್ರಕರಣದಲ್ಲಿ ಮೇಲ್ನೋಟಕ್ಕೆ ಕಂಡುಬಂದ ಭದ್ರತಾ ಸಿಬ್ಬಂದಿಯನ್ನು ವಿಶ್ವವಿದ್ಯಾಲಯದ ಆವರಣದ ಪೋಲೀಸ್ ಠಾಣೆಗೆ ಒಪ್ಪಿಸಲಾಗಿರುತ್ತದೆ. ಸಂಬಂಧಪಟ್ಟ ವಿದ್ಯಾರ್ಥಿಗಳ ಮೇಲೆ ಎಂ.ಪಿ.ಸಿ. ವರದಿಯ ಶಿಫಾರಸ್ಸಿನ ಮೇರೆಗೆ ಸಿಂಡಿಕೇಟ್ ಅನುಮೋದನೆಯೊಂದಿಗೆ ಕ್ರಮ ಕೈಗೊಳ್ಳಲಾಗಿರುತ್ತದೆ.

ಆ) ಹೌದು. ದಿನಾಂಕ 15-5-2001.

ಇ) ಇನ್ನೂ ಸಲ್ಲಿಸಿಲ್ಲ

ಈ) ತನಿಖೆಯು ಇನ್ನೂ ಪೂರ್ಣವಾಗಿಲ್ಲದಿಯವುದರಿಂದ ಬಂದಿರುವುದಿಲ್ಲ

ರಾಜ್ಯದಲ್ಲಿರುವ ದಂತ ವೈದ್ಯ ಕಾಲೇಜುಗಳ ವಿವರಗಳು.

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ: 240(696)

ಸದಸ್ಯರ ಹೆಸರು: ಶ್ರೀ ಜಗದೀಶ್ ಶೆಟ್ಟರ್(ಹುಬ್ಬಳ್ಳಿ ಗ್ರಾಮೀಣ)

ಉತ್ತರಿಸುವ ಸಚಿವರು: ಡಾ:ಜಿ.ಪರಮೇಶ್ವರ್(ಉನ್ನತ ಶಿಕ್ಷಣ ಹಾಗೂ ವೈದ್ಯಕೀಯ ಶಿಕ್ಷಣ ರಾಜ್ಯ ಸಚಿವರು)